# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 32/2020 ಪಿ.ಡಬ್ಲ್ಯೂಃ 8

ಸಿಡಬ್ಲೂಃ 18

ಸಾಕ್ಷಿದಾರರ ಹೆಸರು : ಬಸವರಾಜ

ತಂದೆಯ ಹೆಸರು : ಚೆನ್ನಬಸಪ್ಪ ಕಲ್ಲಮ್ಮನವರ

ವಯಸ್ಸು : 64 ವರ್ಷ

ಉದ್ಯೋಗ : ನಿವೃತ್ತ ಪೋಲೀಸ ನಿರೀಕ್ಷಕರು

ವಾಸ್ತವ್ಯ : ಹಾವೇರಿ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 18-01-2025

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು ದಿನಾಂಕಃ 27.02.2019 ರಿಂದ 20.06.2019 ರ ವರೆಗೆ ವೃತ್ತ ನಿರೀಕ್ಷಕರು , ಕದ್ರಾ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 27.02.2019 ರಂದು ಪ್ರಕರಣದ ಕಡತವನ್ನು ನಾನು ಚಾಸಾ.17 ರವರಿಂದ ಪಡೆದುಕೊಂಡು ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಿ ದಿನಾಂಕಃ 28.04.2019 ರಂದು ಆರ್ ಟಿ ಓ ಕಾರವಾರ ಇವರಿಂದ ಅಪಘಾತದಲ್ಲಿ ಭಾಗಿಯಾದ ವಾಹನದ ಎಂ ವಿ ಪರೀಕ್ಷಾ ವರದಿಯನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಚಾಸಾ.15 ರವರಿಂದ ಭಾ.ಸಾ.ಅ.ನಿಯಮ 65(ಬಿ) ಅಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿದ್ದು , ದಿನಾಂಕಃ 30.05.2019 ರಂದು ಆರೋಪಿತನ ವಾಹನ ಚಲಾವಣಾ ಪರವಾನಿಗೆಯನ್ನು ರದ್ದು ಮಾಡುವ ಸಲುವಾಗಿ ಆರ್ ಟಿ ಓ, ಕಾಣಕೋಣ , ಗೋವಾ ಇವರಿಗೆ ಪತ್ರವನ್ನು ಬರೆದಿರುತ್ತೇನೆ. ಆರೋಪಿತನ ವಿರುದ್ಧ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಸಾಕ್ಷ್ಯ ಪುರಾವೆಗಳು ತನಿಖಾ ಸಮಯದಲ್ಲಿ ಕಂಡು ಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ವಾಹನ ಪರಿಕ್ಷಾ ವರದಿಯನ್ನು (ಎಂ ವಿ ರಿಪೋರ್ಟ) ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ.13 ಎಂದು , ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ಆರ್ ಟಿ ಓ ಕಾಣಕೋಣ ಇವರಿಗೆ ಬರೆದ ಪತ್ರ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ.14 ಮತ್ತು ನಿಪಿ.14(ಎ) ಎಂದು ಗುರುತಿಸಲಾಯಿತು.

ಭಾ.ಸಾ.ಅ. ನಿಯಮ 65(ಬಿ) ಅಡಿಯಲ್ಲಿ ನೀಡಿದ ಪ್ರಮಾಣ ಪತ್ರ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ.15 ಮತ್ತು ನಿಪಿ.15(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ಆರೋಪಿ ಪರ ವಕೀಲರಿಂದ**

**3.** ಸದಾಶಿವಗಡದಿಂದ ಗೋವಾಕ್ಕೆ ಹೋಗುವ ರಸ್ತೆಯ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿ. ಅಪಘಾತ ಆದ ದಿವಸದಂದು ಸದರಿ ರಸ್ತೆಯಲ್ಲಿ ಕಾರವಾರದಿಂದ ಗೋವಾಕ್ಕೆ ಹೋಗುವ ರಸ್ತೆ ಮಾತ್ರ ತೆರೆದಿದ್ದು , ಆ ದಿವಸ ಅದು ಏಕಮುಖ ಸಂಚಾರ ಆಗಿತ್ತು ಎಂದರೆ ಸರಿಯಲ್ಲ. ಅಪಘಾತ ಸಂಭವಿಸಿದ ದಿನದಂದು ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದು ಇರುವುದಿಲ್ಲಾ. ನಾನು ಯಾವುದೇ ವಾಹನ ಪರೀಕ್ಷಾ ವರದಿಯನ್ನುಪಡೆದುಕೊಂಡಿರುವುದಿಲ್ಲಾ ಮತ್ತು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುವುದಿಲ್ಲಾ ಎಂದರೆ ಸರಿಯಲ್ಲ. ಆರ್ ಟಿ ಓ ಕಾಣಕೋಣ ಇವರಿಗೆ ಪತ್ರವನ್ನು ಬರೆದಿರುವುದಿಲ್ಲಾ ಎಂದರೆ ಸರಿಯಲ್ಲ. ಭಾ.ಸಾ.ಅ.ನಿಯಮದಡಿಯಲ್ಲಿ ಯಾವುದೇ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲಾ ಹಾಗೂ ನನ್ನ ತನಿಖೆಯ ಕಾಲಕ್ಕೆ ಆರೋಪಿತನ ತಪ್ಪು ಕಂಡು ಬಾರದೇ ಇದ್ದರೂ ಸಹಿತ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿರುತ್ತದೆಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**